**ದಿಃ 25-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 6 ನೇ ಪ್ರತಿವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದ**

ನನಗೆ ಮತ್ತು ಉಳಿದ ವಾದಿಯರ ನಡುವೆ ಯಾವುದೇ ವಿವಾದ ಇಲ್ಲ. ಪ್ರಾಸಾ 1 ರವರು ಎಲ್ಲರ ಪರವಾಗಿ ಸಾಕ್ಷಿ ಕೊಟ್ಟಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಹೇಳಿಕೆ ಕೊಟ್ಟಿರುವುದು ಸರಿಯಿಲ್ಲದ ಕಾರಣ ನಾನು ವಿಚಾರಣೆ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರಾಸಾ 1 ರವರು ತಮ್ಮ ಪಾಟೀ ಸವಾಲಿನಲ್ಲಿ ಕೆಲವು ವಿಷಯಗಳನ್ನು ಒಪ್ಪಿಕೊಂಡಿದ್ದರಿಂದ ಅದು ಅಲ್ಲ ಎಂದು ಹೇಳುವ ಸಂಬಂಧ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಪ್ರಾಸಾ 1 ರವರು ಆಸ್ತಿ ವಿಷಯಕ್ಕೆ ಸಂಬಂಧಿಸಿದಂತೆ ಸರಿಯಾಗಿಯೇ ಸಾಕ್ಷಿಯನ್ನು ನುಡಿದಿರುತ್ತಾರೆ ಎಂದರೆ ಸಾಕ್ಷಿಯು ಕೆಲವೊಂದನ್ನು ಸರಿಯಾಗಿ ಹೇಳಿರುತ್ತಾರೆ, ಕೆಲವೊಂದನ್ನು ಸರಿಯಾಗಿ ಹೇಳಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಗಂಗಾಧರಪ್ಪ ಮತ್ತು ನಿಂಗಪ್ಪ ಅಣ್ಣ ತಮ್ಮಂದಿರು ಎಂದರೆ ಸರಿ. ನಮ್ಮ ತಂದೆ ಮೃತಪಟ್ಟು ಸುಮಾರು 30-35 ವರ್ಷ ಆಗಿರಬಹುದು. ನಿಂಗಪ್ಪರವರು ನಮ್ಮ ತಂದೆ ಮೃತಪಡುವ ಮೊದಲೇ ಮೃತಪಟ್ಟಿರುತ್ತಾರೆ. ನಮ್ಮ ತಂದೆ ಮತ್ತು ನಿಂಗಪ್ಪರವರ ಮನೆಗೆ ಸುಮಾರು 2 ಫರ್ಲಾಂಗ್ ದೂರ ಇರಬಹುದು. ನಮ್ಮ ತಂದೆ ವಾಸವಿದ್ದ ಮನೆಯಲ್ಲಿ ನಾವು ಹುಟ್ಟಿ ಬೆಳೆದಿರುತ್ತೇವೆ ಎಂದರೆ ಸರಿ. ಸದರಿ ಮನೆಯನ್ನು ಕಟ್ಟಿ ಎಷ್ಟು ವರ್ಷಗಳು ಆಗಿರಬಹುದು ಎಂದು ನನಗೆ ಗೊತ್ತಿಲ್ಲ. ನಮ್ಮ ತಂದೆ ಮೃತಪಟ್ಟ ನಂತರ 2014 ರಲ್ಲಿ ಹಳೆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿರುತ್ತೇವೆ. ನಿಂಗಪ್ಪರವರು ವಾಸವಿದ್ದ ಮನೆ ಸಹ ಹಳೆ ಮನೆ ಇತ್ತು ಎಂದರೆ ಸರಿ. ನಮ್ಮ ತಂದೆಯವರು ವಾಸವಿದ್ದ ಮನೆಯಲ್ಲಿ ವಾದಿಯರೆಲ್ಲರೂ ವಾಸವಿರುತ್ತೇವೆ ಎಂದರೆ ಸರಿ. ನಮ್ಮ ತಂದೆಯವರು ನಮ್ಮ ಕುಟುಂಬದ ಯಜಮಾನಿಕೆಯನ್ನು ಮಾಡಿದರೆ ನಿಂಗಪ್ಪರವರ ಕುಟುಂಬದ ಯಜಮಾನಿಕೆಯನ್ನು ನಿಂಗಪ್ಪರವರು ಮಾಡುತ್ತಿದ್ದರು ಎಂದರೆ ಸರಿ. ನಾವು 5 ಜನ ಅಣ್ಣ ತಮ್ಮಂದಿರು ಇರುತ್ತೇವೆ. ಈಗ 10 ವರ್ಷಗಳಿಂದ ನಾವು ಬೇರೆ ಬೇರೆ ವಾಸವಿರುತ್ತೇವೆ. ನಮ್ಮ ತಂದೆ ಜೀವಂತ ಇದ್ದಾಗ ಅವರು 1 ಎಕರೆ 37 ಗುಂಟೆ ಜಮೀನನ್ನು ಅನುಬೋಗ ಮಾಡುತ್ತಿದ್ದರು. 1 ಎಕರೆ 37 ಗುಂಟೆ ಜಮೀನಿನ ಸ.ನಂ.145/1 ಇರುತ್ತದೆ. ದಾವಾದ ಆಸ್ತಿಯ ಐಟಂ ನಂ. 5 ರಿಂದ 7 ನ್ನು ನಮ್ಮ ತಂದೆಯವರ ಅನುಭೋಗದಲ್ಲಿ ಇದ್ದವು ಎಂದರೆ ಸರಿ. ಐಟಂ ನಂ.8 ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯರ ಅನುಭೋಗದಲ್ಲಿರುತ್ತದೆ ಎಂದರೆ ಸರಿ. ಬಿಲ್ಲಹಳ್ಳಿ ಗ್ರಾಮದ ಸ.ನಂ.9/1 ಮೂಲತಃ ನಮ್ಮ ತಂದೆ ಮತ್ತು ನಿಂಗಪ್ಪರವರ ಅನುಭೋಗದಲ್ಲಿ ಇತ್ತು ಎಂದರೆ ಸರಿ. ಸದರಿ ಆಸ್ತಿಯನ್ನು 1969 ಮತ್ತು 1973 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆ ಮತ್ತು ನಿಂಗಪ್ಪರವರು ಬೇರೆ ಬೇರೆ ವಾಸವಿದ್ದಾಗ ಅವರು ಕುಟುಂಬದ ಆಸ್ತಿಗಳನ್ನು ಜುಬಾನೆ ಪಾಲು ವಿಭಾಗದ ಮೂಲಕ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಬೇರೆ ಬೇರೆಯಾಗಿ ಅನುಭೋಗ ಮಾಡುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ಬಿಲ್ಲಹಳ್ಳಿ ಗ್ರಾಮದ ಸ.ನಂ.9 ರಲ್ಲಿ 3 ಎಕರೆ 4 ಗುಂಟೆ ಜಮೀನನ್ನು ನಮ್ಮ

ತಂದೆಯವರಿಗೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಸದರಿ ಆಸ್ತಿಯನ್ನು 1969 ಮತ್ತು 1973 ರಲ್ಲಿ ಎರಡು ಕ್ರಯ ಪತ್ರದ ಮೂಲಕ ಮೂರ್ತಪ್ಪ ಎನ್ನುವವರಿಗೆ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನು ಈಗ ಮೂರ್ತಪ್ಪರವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಸದರಿ ಜಮೀನು ಜುಬಾನೆ ಪಾಲು ವಿಭಾಗದಲ್ಲಿ ನಮ್ಮ ತಂದೆಯವರಿಗೆ ಬಂದಿದ್ದು ಅದನ್ನು ಮೂರ್ತಪ್ಪ ಎನ್ನುವವರಿಗೆ ಎರಡು ಕ್ರಯಪತ್ರದಲ್ಲಿ ಮಾರಾಟ ಮಾಡಿದ್ದು ಅದಕ್ಕೆ ನಿಂಗಪ್ಪರವರು ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ.

ನಮ್ಮ ತಂದೆ ಜೀವಂತ ಇದ್ದಾಗ ದಾವಾದ ಆಸ್ತಿಯ ಐಟಂ ನಂ. 5 ರಿಂದ 7 ನ್ನು ಉಪಭೋಗ ಮಾಡುತ್ತಿದ್ದು ಅವರ ಮರಣದ ನಂತರ ನಾವು ಉಪಭೋಗ ಮಾಡುತ್ತಿದ್ದೇವೆ ಎಂದರೆ ಸರಿ. ಈ ಆಸ್ತಿಗಳ ಖಾತೆಗಳು ಮೂಲತಃ ನಿಂಗಪ್ಪರವರ ಹೆಸರಿನಲ್ಲಿದ್ದವು ಎಂದರೆ ಸರಿ. ನಿಂಗಪ್ಪರವರು ಮೃತಪಟ್ಟ ನಂತರ ಆ ಆಸ್ತಿಗಳು ಅವರ ಹೆಂಡತಿ ಚನ್ನಮ್ಮರವರ ಹೆಸರಿಗೆ ಬಂದವು ಎಂದರೆ ಸರಿ. ನಮ್ಮ ತಂದೆ ಮೃತಪಟ್ಟ ನಂತರ ನಾವು ಚನ್ನಮ್ಮರವರಿಗೆ ಅವರ ಹೆಸರಿನಲ್ಲಿರುವ ಐಟಂ ನಂ. 5 ರಿಂದ 7 ಆಸ್ತಿಗಳನ್ನು ನಮ್ಮ ಹೆಸರಿಗೆ ಮಾಡಿಕೊಡುವಂತೆ ಕೇಳಿದ್ದೆವು ಎಂದರೆ ಸರಿ. ಆಗ ಚನ್ನಮ್ಮರವರು ಸದರಿ ಆಸ್ತಿಗಳಿಗೆ ಸಂಬಂಧಿಸಿದಂತೆ ಮೂರು ವಿಲ್ ಗಳನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ವಿಲ್ ಗಳು 4 ಮತ್ತು 5 ನೇ ವಾದಿ ಹಾಗೂ 7 ನೇ ಪ್ರತಿವಾದಿಯರ ಹೆಸರಿನಲ್ಲಿ ಆಗಿರುತ್ತವೆ. ಸದರಿ ವಿಲ್ ಗಳ ಆಧಾರದ ಮೇರೆಗೆ ನಮ್ಮ ಅನುಭೋಗದಲ್ಲಿರುವ ಐಟಂ ನಂ. 5 ರಿಂದ 7 ಆಸ್ತಿಗಳನ್ನು ನಮ್ಮ ನಮ್ಮ ಖಾತೆಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ. 2 ನೇ ವಾದಿಯ ಗಂಡ ಮೃತಪಟ್ಟು ಸುಮಾರು 20 ವರ್ಷಗಳು ಆಗಿರಬಹುದು. ಅವರು ಮೃತಪಟ್ಟು ಸುಮಾರು 30 ವರ್ಷಗಳು ಆಗಿರುತ್ತವೆ ಎಂದರೆ ಸರಿ. 2 ನೇ ವಾದಿಯು ತನ್ನ ಗಂಡ ಮೃತಪಟ್ಟ ನಂತರ ತನ್ನ ತವರುಮನೆಯಾದ ಭದ್ರಾವತಿ ತಾಲ್ಲೂಕು ಅತ್ತಿಗುಂದ ಗ್ರಾಮದಲ್ಲಿ ವಾಸವಿದ್ದರು ಎಂದರೆ ಸರಿ. 3 ನೇ ವಾದಿಯ ಗಂಡ ಮೃತಪಟ್ಟು ಸುಮಾರು 20 ವರ್ಷಗಳು ಆಗಿರಬಹುದು. 3 ನೇ ವಾದಿಯು ಈಗ ನಮ್ಮ ಊರಿನಲ್ಲಿಯೇ ವಾಸವಿರುತ್ತಾರೆ. 3 ನೇ ವಾದಿಯ ಗಂಡ ಮೃತಪಟ್ಟ ನಂತರ ಅವರು ಯಾವುದೇ ಜಮೀನನ್ನು ಸಾಗುವಳಿ ಮಾಡುತ್ತಿಲ್ಲ ಎಂದರೆ ಸರಿ. ಐಟಂ ನಂ. 6 ರಲ್ಲಿರುವ ಉಮೇಶಪ್ಪರವರ ಹಿಸ್ಸೆಯ ಆಸ್ತಿಯನ್ನು 7 ನೇ ಪ್ರತಿವಾದಿಯು ಖರೀದಿಸಿರುತ್ತಾರೆ. ಕುಬೇರಪ್ಪರವರಿಗೂ ಸಹ ಹಿಸ್ಸೆಯನ್ನು ಕೊಟ್ಟಿದ್ದು ಅವರ ಹಿಸ್ಸೆಯನ್ನು ನನಗೆ ಬಿಟ್ಟುಕೊಟ್ಟಿರುತ್ತಾರೆ. ಐಟಂ ನಂ . 7 ರಲ್ಲಿರುವ 24 ಗುಂಟೆ ಜಮೀನನ್ನು ನಾನೇ ಸಾಗುವಳಿ ಮಾಡುತ್ತಿದ್ದೇನೆ. 5 ನೇ ವಾದಿಯ ಆಸ್ತಿಯಾದ ಐಟಂ ನಂ. 6 ನ್ನು ಈಗಲೂ ಅವರೇ ಸಾಗುವಳಿ ಮಾಡುತ್ತಿದ್ದಾರೆ. ಐಟಂ ನಂ. 5 ರಿಂದ 7 ಆಸ್ತಿಗಳನ್ನು ನಮ್ಮ ಹೆಸರಿಗೆ ವಿಭಾಗ ಮಾಡಿಕೊಳ್ಳುವಾಗ ಚನ್ನಮ್ಮರವರಿಗೆ ಎಲ್ಲಾ ಆಸ್ತಿಗಳಲ್ಲಿ ವಿಭಾಗ ಮಾಡಿಕೊಡುವಂತೆ ಕೇಳಿದ್ದೆವು. ಆ ಕಾಲಕ್ಕೆ ಚನ್ನಮ್ಮರವರು ಮೇಲೆ ಹೇಳಿದ ವಿಲ್ ಗಳನ್ನು ಬರೆದುಕೊಟ್ಟಿದ್ದರು ಎಂದರೆ ಸರಿ. ಚನ್ನಮ್ಮ ಮೃತಪಟ್ಟು ಈಗ 15-20 ವರ್ಷ ಆಗಿರಬಹುದು. ಚನ್ನಮ್ಮ ಮೃತಪಟ್ಟ ನಂತರ ನಮ್ಮ ಮತ್ತು ಪ್ರತಿವಾದಿಯರ ನಡುವೆ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವಿವಾದ ಆಗಿಲ್ಲ ಎಂದರೆ ಸರಿ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ 7 ನೇ ಪ್ರತಿವಾದಿಗೆ ದಾವೆ ದಾಖಲಿಸಲು ಬರುವಂತೆ ಕೇಳಿದ್ದೆವು ಆದರೆ ಅವರು ಬರಲಿಲ್ಲ. ನಮ್ಮ ತಂದೆಯವರಿಗೆ ಬರಬೇಕಾದ ಎಲ್ಲಾ

ಆಸ್ತಿಗಳನ್ನು ಈಗಾಗಲೇ ಕೊಟ್ಟಿರುವುದರಿಂದ ತಾನೂ ಬರುವುದಿಲ್ಲ ಎಂದು 7 ನೇ ಪ್ರತಿವಾದಿ ನಮಗೆ ಹೇಳಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವೆಯನ್ನು ದಾಖಲಿಸುವ ಸಮಯದಲ್ಲಿ ಐಟಂ ನಂ 5 ರಿಂದ 7 ಆಸ್ತಿಗಳನ್ನು ನಾವು ಅನುಭೋಗ ಮಾಡುತ್ತಿದ್ದೇವೆ ಎನ್ನುವ ವಿಷಯವನ್ನು ಮತ್ತು ವಿಲ್ ವಿಷಯವನ್ನು ನಮ್ಮ ವಕೀಲರಿಗೆ ಹೇಳಿರಬಹುದು.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.